**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು,**
**ದೇವದುರ್ಗ ನ್ಯಾಯಾಲಯ, ದೇವದುರ್ಗ.**

**ಸಿ.ಸಿ ನಂ.644/2023**

ಪಿರ್ಯಾದಿದಾರರು : ಜಾಲಹಳ್ಳಿ ಪೋಲಿಸ್ ಠಾಣೆ.

ವಿರುದ್ಧ

ಆರೋಪಿ: 1. ಮಾರುತಿ ತಂದೆ ಶರಣಪ್ಪ ವಯಸ್ಸುಃ 30 ವರ್ಷಗಳು,
ಉಃ ಅಂಗಡಿ ಕೆಲಸ, ಸಾಃ ಶಾವಂತಗಲ್.

**ಭಾರತ ದಂಡ ಸಂಹಿತೆ ಕಲಂ 313 ರ ರಿತ್ಯಾ ಆರೋಪಿಗಳ ಹೇಳಿಕೆಗಳು**

ಪ್ರಶ್ನೆ-1) ನ್ಯಾಯಾಲಯದಲ್ಲಿ ಅಭಿಯೋಜನೆಯ ಪರ ನೀಡಿದ ಸಾಕ್ಷಿದಾರರ ಸಾಕ್ಷ್ಯವನ್ನು ಕೇಳಿಕೊಂಡಿದ್ದಿರಾ ?

ಉತ್ತರಃ

ಪ್ರಶ್ನೆ-2) ಪ್ರಾಸಾ-3 ಸುಜಾತ ಗಂಡ ದಶವಾನ ಇವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕ 24-06-2023 ರಂದು ಬೆಳಿಗ್ಗೆ 11.00 ಗಂಟೆಗೆ ಶಾವಂತಗಲ್ ಗ್ರಾಮದ ಮಾರುತಿ ತಂದೆ ಶರಣಪ್ಪ ಮುಂಡರಗಿ ಇವರು ತಮ್ಮ ಅಂಗಡಿ ಮುಂದೆ ಸಾರ್ವಜನಿಕ ಸ್ಥಳದಲ್ಲಿ ಪರವಾನಿಗೆ ಇಲ್ಲದೇ ಅಕ್ರಮ ಮಧ್ಯ ಮಾರಾಟ ಮಾಡುತ್ತಿದ್ದಾರೆ ಎಂದು ಬಾತ್ಮಿ ಬಂದಿರುತ್ತದೆ ಎಂದು ನಿಮ್ಮ ವಿರುದ್ದ ಸಾಕ್ಷ್ಯ ನುಡಿದಿದ್ದು, ಈ ಬಗ್ಗೆ ನೀವೆನಾದರೂ ಹೇಳುವುದು ಇದೆಯೇ ?

ಉತ್ತರಃ

ಪ್ರಶ್ನೆ-3) ಪ್ರಾಸಾ-3 ರವರು ತಮ್ಮ ಮುಂದುವರೆದ ಮುಖ್ಯವಿಚಾರಣೆಯಲ್ಲಿ ಬಾತ್ಮಿ ಮೇರೆಗೆ ಮೇಲಾಧಿಕಾರಿಗಳ ಮಾರ್ಗದರ್ಶನದಲ್ಲಿ ತಕ್ಷಣ ಪಂಚರನ್ನು ಬರ ಮಾಡಿಕೊಂಡು ಸಿಬ್ಬಂದಿ ಜೊತೆ ಮಧ್ಯಾಹ್ನ 12.35 ಗಂಟೆಗೆ ಸ್ಥಳಕ್ಕೆ ಹೋಗಿ ನೋಡಲಾಗಿ ಮಾರುತಿ ತಂದೆ ಶರಣಪ್ಪ ತನ್ನ ಡಬ್ಬಿ ಅಂಗಡಿ ಮಂದೆ ಸಾರ್ವಜನಿಕ ಸ್ಥಳದಲ್ಲಿ ಮಧ್ಯ ಮಾರಾಟ ಮಾಡುತ್ತಿದ್ದು ಜನರು ಖರೀದಿ ಮಾಡುತ್ತಿದ್ದರು, ದಾಳಿ ಮಾಡಿದ್ದು ಖರೀದಿಸಲು ಬಂದಿದ್ದ ಜನ ಓಡಿ ಹೋಗಿರುತ್ತಾರೆ ಎಂದು ನಿಮ್ಮ ವಿರುದ್ದ ಸಾಕ್ಷ್ಯ ನುಡಿದಿದ್ದು, ಈ ಬಗ್ಗೆ ನೀವೆನಾದರೂ ಹೇಳುವುದು ಇದೆಯೇ ?

ಉತ್ತರಃ

ಪ್ರಶ್ನೆ-4) ಫ್ರಾಸಾ-3 ರವರು ತಮ್ಮ ಮುಂದುವರೆದ ಮುಖ್ಯವಿಚಾರಣೆಯಲ್ಲಿ ಮಾರಾಟ ಮಾಡುತ್ತಿದ್ದ ವ್ಯಕ್ತಿ ಸಿಕ್ಕಿ ಬಿದ್ದಿದ್ದು ಆತನನ್ನು ವಿಚಾರಿಸಿದಾಗ ಮಾರುತಿ ತಂದೆ ಶರಣಪ್ಪ ಮುಂಡರಗಿ ಎಂದು ತಿಳಿದು ಬಂದಿದ್ದು ಆತನ ಬಳಿ 90 ಎಂ.ಎಲ್ ಓ.ಸಿ ಮಧ್ಯದ 36 ಪೌಚುಗಳನ್ನು ಪಂಚರ ಸಮಕ್ಷಮ ಜಪ್ತಿ ಮಾಡಿಕೊಂಡು ಸದರಿ ಮಧ್ಯವನ್ನು ರಾಸಾಯನಿಕ ಪರೀಕ್ಷೆ ಕುರಿತು ಸೀಲ್ ಮಾಡಿ ಎಸ್.ಕೆ ಎಂಬ ಮೋಹರನ್ನು ಹಾಕಿರುತ್ತೇವೆ ಎಂದು ನಿಮ್ಮ ವಿರುದ್ದ ಸಾಕ್ಷ್ಯನುಡಿದಿದ್ದು, ಈ ಬಗ್ಗೆ ನೀವೆನಾದರೂ ಹೇಳುವುದು ಇದೆಯೇ ?

ಉತ್ತರಃ

ಪ್ರಶ್ನೆ-5) ಫ್ರಾಸಾ-3 ರವರು ತಮ್ಮ ಮುಂದುವರೆದ ಮುಖ್ಯವಿಚಾರಣೆಯಲ್ಲಿ ನಾನು ಮತ್ತು ಪಂಚರು ಸಹಿ ಮಾಡಿದ ಚೀಟಿ ಅಂಟಸಿರುತ್ತೇವೆ. ಆರೋಪಿತನ ಹೆಸರು ಮತ್ತು ವಿಸಾಳ ಕುರಿತು ಚಾಸಾ-7 ರವರನ್ನು ಸ್ಥಳದಲ್ಲಿ ವಿಚಾರಿಸಲಾಗಿ ಆರೋಪಿ ಹೇಳಿದ ಹೆಸರು ಮತ್ತು ವಿಳಾಸ ಸರಿಯಾಗಿ ಹೇಳಿದ್ದನ್ನು ಖಚಿತಪಡಿಸಿಕೊಂಡಿರುತ್ತೇನೆ ಎಂದು ನಿಮ್ಮ ವಿರುದ್ದ ಸಾಕ್ಷ್ಯ ನುಡಿದಿದ್ದು, ಈ ಬಗ್ಗೆ ನೀವೆನಾದರೂ ಹೇಳುವುದು ಇದೆಯೇ ?

ಉತ್ತರಃ

ಪ್ರಶ್ನೆ-6) ಫ್ರಾಸಾ-3 ರವರು ತಮ್ಮ ಮುಂದುವರೆದ ಮುಖ್ಯವಿಚಾರಣೆಯಲ್ಲಿ ಮುಮಾಗಳನ್ನು ಮತ್ತು ಪಂಚನಾಮೆ ಹಾಗೂ ಆರೋಪಿಯನ್ನು ಠಾಣೆಗೆ ಕರೆ ತಂದು ಮುದಿನ ಕ್ರಮ ಕುರಿತು ಚಾಸಾ-10 ರವರಿಗೆ ಕ್ರಮ ಕೈಗೊಳ್ಳುವಂತೆ ಜ್ಞಾಪನವನ್ನು ನೀಡಿರುತ್ತೇನೆ. ಪಂಚನಾಮೆಯನ್ನು ಮಧ್ಯಾಹ್ನ 12.35 ರಿಂದ 01.15 ಗಂಟೆ ವರೆಗೆ ಮಾಡಿರುತ್ತೇವೆ. ಸಾಕ್ಷಿಯು ಜ್ಞಾಪನ ಪತ್ರ ಮತ್ತು ಮುದ್ದೆಮಾಲನ್ನು ಗುರುತಿಸಿಕೊಂಡು ನಿಮ್ಮ ವಿರುದ್ದ ಸಾಕ್ಷ್ಯ ನುಡಿದಿದ್ದು, ಈ ಬಗ್ಗೆ ನೀವೆನಾದರೂ ಹೇಳುವುದು ಇದೆಯೇ ?

ಉತ್ತರಃ

ಪ್ರಶ್ನೆ-7) ಫ್ರಾಸಾ-4 ದೇವರಾಜ ತಂದೆ ಕಾಳಿಂಗ ನಾಯಕ ಇವರು ತಮ್ಮ ಸಾಕ್ಷಿಯಲ್ಲಿ ದಿನಾಂಕ 24-06-2023 ರಂದು ಬೆಳಿಗ್ಗೆ 11:40 ಗಂಟೆಗೆ ಪಿ.ಎಸ್.ಐ ಇವರಿಗೆ ಬಾತ್ಮಿ ಬಂದ ಮೇರೆಗ ಠಾಣೆಗೆ ಪಂಚರನ್ನು ಕರೆದುಕೊಂಡು ಸರಕಾರಿ ವಾಹನದಲ್ಲಿ ಹೊರಟು ಮಧ್ಯಾಹ್ನ 12.30 ಗಂಟೆಗೆ ಶಾವಂತಗಲ್ ಗ್ರಾಮದ ಶಾಲೆ ಹತ್ತಿರ ಹೊರ ವಲಯದಲ್ಲಿ ವಾಹನ ನಿಲ್ಲಿಸಿ

ಮಾರುತಿ ತಂದೆ ಶರಣಪ್ಪ ಇವರ ಡಬ್ಬಿ ಅಂಗಡಿ ಕಡೆಗೆ ನಡೆದುಕೊಂಡು ಹೋಗಿರುತ್ತೇವೆ ಎಂದು ನಿಮ್ಮ ವಿರುದ್ಧ ಸಾಕ್ಷ್ಯ ನುಡಿದಿದ್ದು, ಈ ಬಗ್ಗೆ ನೀವೇನಾದರೂ ಹೇಳುವುದು ಇದೆಯೇ ?

ಉತ್ತರಃ

ಪ್ರಶ್ನೆ-8) ಫ್ರಾಸಾ-4 ರವರು ತಮ್ಮ ಮುಂದುವರೆದ ಮುಖ್ಯವಿಚಾರಣೆಯಲ್ಲಿ ನೋಡಲಾಗಿ ಸದರಿ ಅಂಗಡಿ ಮುಂದೆ ಸಾರ್ವಜನಿಕ ಸ್ಥಳದಲ್ಲಿ ಮಧ್ಯದ ಪೌಚುಗಳನ್ನು ಮಾರಾಟ ಮಾಡುತ್ತಿದ್ದು ಜನರು ಕೊಂಡು ಕೊಳ್ಳುತ್ತಿದ್ದು ಸದರಿ ಮಾರಾಟವನ್ನು ಖಚಿತಪಡಿಸಿಕೊಂಡು ಮಧ್ಯಾಹ್ನ 12.35 ಗಂಟೆಗೆ ದಾಳಿ ಮಾಡಿದ್ದು ಜನರು ಓಡಿ ಹೋಗಿದ್ದು ಮಾರಾಟ ಮಾಡುತ್ತಿದ್ದ ವ್ಯಕ್ತಿ ಸಿಕ್ಕಿಬಿದ್ದಿರುತ್ತಾನೆ ಎಂದು ನಿಮ್ಮ ವಿರುದ್ಧ ಸಾಕ್ಷ್ಯ ನುಡಿದಿದ್ದು, ಈ ಬಗ್ಗೆ ನೀವೇನಾದರೂ ಹೇಳುವುದು ಇದೆಯೇ ?

ಉತ್ತರಃ

ಪ್ರಶ್ನೆ-9) ಫ್ರಾಸಾ-4 ರವರು ತಮ್ಮ ಮುಂದುವರೆದ ಮುಖ್ಯವಿಚಾರಣೆಯಲ್ಲಿ ಆತನನ್ನು ವಿಚಾರಿಸಲಾಗಿ ಹೆಸರು ಮಾರುತಿ ತಂದೆ ಶರಣಪ್ಪ ಎಂದು ತಿಳಿಸಿದ್ದು ಮಧ್ಯ ಮಾರಲು ಪರವಾನಿಗೆ ಇಲ್ಲವೆಂದು ಹೇಳಿರುತ್ತಾನೆ. ಸ್ಥಳದಲ್ಲಿ ಅಕ್ರಮ ಮಧ್ಯವನ್ನು ಪಂಚರ ಸಮಕ್ಷಮ ಪರಿಶೀಲಿಸಿ ನೋಡಲಾಗಿ 90 ಎಂ.ಎಲ್ ಓ.ಸಿ 36 ಪೌಚುಗಳು ಇದ್ದು ಅವುಗಳನ್ನು ಜಪ್ತಿ ಮಾಡಿಕೊಂಡಿರುತ್ತೇವೆ ಎಂದು ನಿಮ್ಮ ವಿರುದ್ಧ ಸಾಕ್ಷ್ಯ ನುಡಿದಿದ್ದು, ಈ ಬಗ್ಗೆ ನೀವೇನಾದರೂ ಹೇಳುವುದು ಇದೆಯೇ ?

ಉತ್ತರಃ

ಪ್ರಶ್ನೆ-10) ಫ್ರಾಸಾ-4 ರವರು ತಮ್ಮ ಮುಂದುವರೆದ ಮುಖ್ಯವಿಚಾರಣೆಯಲ್ಲಿ ಸ್ಥಳದಲ್ಲಿ ಪಂಚನಾಮೆಯನ್ನು ಮಾಡಿ ಸದರಿ ಮಧ್ಯವನ್ನು ರಾಸಾಯನಿಕ ಪರೀಕ್ಷೆಗಾಗಿ ಸೀಲ್ ಮಾಡಿ ಪಂಚರ ಸಹಿಯುಳ್ಳ ಚೀಟಿಯನ್ನು ಅಂಟಿಸಲಾಗಿತ್ತು ಎಂದು ನಾನು ಹೇಳಿಕೆ ನೀಡಿರುತ್ತೇನೆ. ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಆರೋಪಿ ಗೈರು ಹಾಜರು ಇದ್ದು ಗುರುತಿನ ಬಗ್ಗೆ ತಕರಾರು ಇಲ್ಲವೆಂದು ವಕೀಲರು ಹೇಳಿರುತ್ತಾರೆ ಎಂದು ನಿಮ್ಮ ವಿರುದ್ಧ ಸಾಕ್ಷ್ಯ ನುಡಿದಿದ್ದು, ಈ ಬಗ್ಗೆ ನೀವೇನಾದರೂ ಹೇಳುವುದು ಇದೆಯೇ ?

ಉತ್ತರಃ

ಪ್ರಶ್ನೆ-11) ಫಿರ್ಯಾದಿ ಸಾಕ್ಷಿ-5 ಶೇಖರಪ್ಪ ಎಮ್ ತಂದೆ ಬಸ್ಸಣ್ಣ ಇವರು ತಮ್ಮ ಸಾಕ್ಷಿಯಲ್ಲಿ ದಿನಾಂಕ 24.06.2023 ರಂದು ಮಧ್ಯಾಹ್ನ 02:30 ಗಂಟೆಗೆ ನಾನು ಠಾಣೆಯಲ್ಲಿ ಇದ್ದಾಗ ಚಾಸಾ-1 ರವರು ಠಾಣೆಗೆ ಹಾಜರಾಗಿ ನೀಡಿದ ದೂರು ಮತ್ತು ದಾಳಿ ಪಂಚನಾಮೆ ಆಧಾರದ ಮೇಲೆ ಠಾಣಾ ಗುನ್ನೆ ನಂ.97/2023 ರಲ್ಲಿ ಪ್ರಕರಣ ದಾಖಲು ಮಾಡಿಕೊಂಡು ಪ್ರ.ವ ವರದಿ ತಯಾರಿಸಿ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ ಎಂದು ನಿಮ್ಮ ವಿರುದ್ಧ ಸಾಕ್ಷ್ಯ ನುಡಿದಿದ್ದು, ಈ ಬಗ್ಗೆ ನೀವೇನಾದರೂ ಹೇಳುವುದು ಇದೆಯೇ ?

ಉತ್ತರಃ

ಪ್ರಶ್ನೆ-12) ಫಿರ್ಯಾದಿ ಸಾಕ್ಷಿ-5 ರವರು ತಮ್ಮ ಮುಂದುವರೆದ ಮುಖ್ಯವಿಚಾರಣೆಯಲ್ಲಿ ಅದೇ ದಿನ ಸಾಕ್ಷಿದಾರರ ಹೇಳಿಕೆಗಳನ್ನು ಪಡೆದಿರುತ್ತೇನೆ. ಅದೇ ದಿನ ಚಾಸಾ-1 ರವರ ಹೇಳಿಕೆ ಪಡೆದಿರುತ್ತೇನೆ. ದಿನಾಂಕ 05.08.2023 ರಂದು ರಾಸಾಯನಿಕ ಪರೀಕ್ಷ ವರದಿ ಪಡೆದು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ನಂತರ ಆರೋಪಿ ವಿರುದ್ಧ ಅಂತಿಮ ವರದಿ ಸಲ್ಲಿಸಿರುತ್ತೇನೆ. ಸಾಕ್ಷಿಯು ಪ್ರಥಮ ವರ್ತಮಾನ ವರದಿ, ರಾಸಾಯನಿಕ ಪರೀಕ್ಷಾ ವರದಿ ಮತ್ತು ಮುದ್ದೆಮಾಲನ್ನು ಗುರುತಿಸಿಕೊಂಡು ನಿಮ್ಮ ವಿರುದ್ಧ ಸಾಕ್ಷ್ಯ ನುಡಿದಿದ್ದು, ಈ ಬಗ್ಗೆ ನೀವೇನಾದರೂ ಹೇಳುವುದು ಇದೆಯೇ ?

ಉತ್ತರಃ

ಪ್ರಶ್ನೆ-13) ನೀವು ಏನಾದರೂ ಹೇಳುವುದಕ್ಕೆ ಬಯಸುತ್ತೀರಾ?

ಉತ್ತರಃ

ಪ್ರಶ್ನೆ-14) ನೀರು ಸಾಕ್ಷಿ ವಿಚಾರಣೆ ಮಾಡಲು ಬಯಸುತ್ತೀರಾ?

ಉತ್ತರಃ

(ಆರೋಪಿಯ ಹೇಳಿಕೆಯನ್ನು ಸ್ವತಃ ನಾನೆ ನನ್ನ ಸಮಕ್ಷಮ ಪಡೆದಿದ್ದು, ಅವರು ನುಡಿದಿದ್ದನ್ನು ಕೇಳಿಸಿಕೊಂಡು ಅವರು ಹೇಳಿದ್ದನ್ನು ನಮೂದಿಸಿರುತ್ತೇನೆಂದು ದೃಢಿಕರಿಸಿರುತ್ತೇನೆ).

ದಿನಾಂಕಃ 20-06-2026 ಹಿರಿಯ ಸಿವಿಲ್ ನ್ಯಾಯಾಧೀಶರು
ಸ್ಥಳಃ ದೇವದುರ್ಗ. ಮತ್ತು ಜೆ.ಎಂ.ಎಫ್.ಸಿ., ದೇವದುರ್ಗ.